ಬಾಯಿಗೆ ಬಂದಂತಾಗಿ ಥಟ್ಟನೆ ಎದ್ದು ಒಳಗೋಡಿದ್ದಳು.

ಈ ಮಾತುಕತೆ ನಡೆದು ಈಗ ಎರಡು ವರ್ಷಗಳೇ ಉರುಳುತ್ತಿದೆ. ಕಿಚನ್‌ಗೆ ನುಗ್ಗಿ ನೀರು ಕುಡಿಯುತ್ತಾಳೆ. ಎರಡು ವರ್ಷಗಳ ದಾಂಪತ್ಯ ಯಾವ ಕಡೆ ನಡೆಯುತ್ತಿದೆ? ಕಾರ್ತಿಕನ ಸ್ವಭಾವ ಎಂದಿಗೂ ಒಂದೇ. ಅವನೊಂದು ಯಂತ್ರ ಮಾನವ. ಊಟ, ತಿಂಡಿ, ಓದು, ಆಫೀಸು, ಮನೆ, ಎಲ್ಲವೂ ಯಾಂತ್ರಿಕ. ತನ್ನ ಹಾಸಿಗೆಯಲ್ಲಿಯ ಅವನ ಆಲಿಂಗನವೂ ಯಾಂತ್ರಿಕವೇ ಆದಾಗ ಅವನನ್ನು ದೂರ ತಳ್ಳಿ ಓಡಿಹೋಗಬೇಕೆನಿಸುತ್ತದೆ. ಉಸಿರು ಕಟ್ಟಿದಂತಾಗಿ ಹೊರಗಿನ ಗಾಳಿಗಾಗಿ ಕಾತರಳಾಗುತ್ತಾಳೆ. ತವರಿಗೆ ಹೋಗಲು ಬೇಸರ. ಭಾವನೆಗಳೇ ಬಾರದ ಬಂದರೂ ಸ್ಥಿರವಾಗಿ ನಿಲ್ಲದ, ಕೈಹಿಡಿದವಳನ್ನು ಕುರಿತು ಗಂಭೀರವಾಗಿ ಆಲೋಚಿಸದ, ಜೊತೆಗಾತಿಯ ಹೃದಯದ ಬಾಗಿಲನ್ನು ತಟ್ಟದ ವ್ಯಕ್ತಿತ್ವ ಅವನದು ಎಂದು ನಿಚ್ಚಳವಾದಾಗ ಅವಳು ಬಾಯಿ ಮುಚ್ಚಿದ ಪಾತ್ರೆಯ ಉಗಿಯಲ್ಲಿ ಬೆಂದವಳಂತೆ ಒದ್ದಾಡುತ್ತಾಳೆ.

ಈಗೀಗ ಅವನು ಹತ್ತಿರ ಬಂದರೂ ಅವಳೂ ಕಲ್ಲಾಗುತ್ತಿದ್ದಾಳೆ. ಅವನ ಸ್ಪರ್ಶ ಜುಗುಪ್ಸೆ ತರಿಸುತ್ತಿದೆ. ಕಾರ್ತಿಕನ ಚೆಲುವು ಶೋಕೇಸಿನ ಗೊಂಬೆಯಂತೆ ಕಂಡು ಯಾವ ಮಧುರ ಭಾವನೆಗಳನ್ನೂ ಹೊರತಳ್ಳದೆ ಹೃದಯ ಕಲ್ಲಾಗುತ್ತಿದೆ. ಹಾಗಾದರೆ ಮುಂದಿನ ಬಾಳೆಲ್ಲ ಹೀಗೆಯೇ ಕಳೆಯಬೇಕೆ? ತನ್ನ ತಾರುಣ್ಯ ಅರುಣ ಚಂದ್ರಿಕೆ ಆಯಿತಲ್ಲ ಎನಿಸಿದಾಗ ಎಂಥದೋ ಭಯದಿಂದ ತರಗುಟ್ಟಿ ನಡುಗುತ್ತಾಳೆ. ಬೇರೆ ದಾರಿಯೇ ಇಲ್ಲ. ಹೀಗೆಯೇ ಇರಬೇಕು ಎನಿಸಿದಾಗ ದಿಗ್ಭ್ರಮೆಗೊಳ್ಳುತ್ತಾಳೆ. ಹೃದಯದಲ್ಲಿಯ ಅವ್ಯಕ್ತ ವೇದನೆ ಹೆಪ್ಪುಗಟ್ಟುತ್ತದೆ. ಉಸಿರುಗಟ್ಟಿದಂತಾಗಿ ಒದ್ದಾಡುತ್ತಾಳೆ.

ಇದೇ ಒದ್ದಾಟದಲ್ಲಿಯೇ ಅವಳು ಕೆಲಸಕ್ಕೆ ಸೇರಿದ್ದು. ಅವಳ ಯಾವ ಮಾತಿಗೂ ಕಾರ್ತಿಕನ ಮುಂಚಿನ ಪ್ರತಿಕ್ರಿಯೆ. ಮನೆಯಲ್ಲಿದ್ದರೆ ಯೋಚನೆಗಳಿಂದ ತಲೆ ಕೆಟ್ಟುಹೋಗುತ್ತದೆ. ಹುಚ್ಚಿಯಾಗುತ್ತೇನೆ ಅಥವಾ ಹೀಗೆಯೇ ಒಂದು ದಿನ ಸಾಯುತ್ತೇನೆ. ಸತ್ತರೂ ನಿದ್ರಿಸಿದ್ದಾಳೆ ಎಂದು ನನ್ನನ್ನು ಎಬ್ಬಿಸುವ ಗೊಡವೆಗೆ ಹೋಗುವುದಿಲ್ಲ ಇವರು. ಕೈಯಲ್ಲಿ ಕೆಲಸವಿದ್ದರೆ ನಾಲ್ಕು ಜನ ಗೆಳತಿಯರಾದರೆ ಸ್ವಲ್ಪವಾದರೂ ವೇದನೆಯ ಬೆಟ್ಟ ಕರಗಬಹುದೇನೋ ಎನ್ನಿಸಿ ಬ್ಯಾಂಕಿನಲ್ಲಿ ಟೈಪಿಸ್ಟ್ ಕೆಲಸಕ್ಕೆ ಸೇರಿದ್ದಳು.

ಸಂತೋಷನೇನೂ ಕಾರ್ತಿಕನಿಗೆ ಸ್ನೇಹಿತನಲ್ಲದೆ ಇದ್ದರೂ ಅಪರಿಚಿತನೇನಾಗಿರಲಿಲ್ಲ. ಆಗಾಗ ತಮ್ಮ ಮನೆಯ ಮುಂದಿನಿಂದಲೇ ಅವನ ಕಾರು ನಡೆದಾಗ ಮನೆಗೆ ಕರೆದದ್ದೂ ಉಂಟು. ಕವಿತಾ ಸಂತೋಷರು ಯಾವುದಾದರೂ ಪುಸ್ತಕದ ಬಗ್ಗೆ, ಚಲನಚಿತ್ರದ ಬಗ್ಗೆ ಮಾತಾಡುತ್ತಿದ್ದರೆ ಕಾರ್ತಿಕ ಮೌನ ಪ್ರೇಕ್ಷಕ, ಒಂದೊಂದು ಸಲ ಬೆಳಿಗ್ಗೆಯೇ ಸಂತೋಷ ಬಂದರೆ, ಕಾರ್ತಿಕ 'ಅವರ ಕಾರಿನಲ್ಲಿಯೇ ಹೋಗು ಕವೀ. ಮಳೆ ಬರೋಹಾಗಿದೆ' ಎಂದು ಕಳಿಸಿದ್ದೂ ಉಂಟು. ಮುಂದಿನ ಸೀಟಿನಲ್ಲಿಯೇ ಸಂತೋಷನ ಪಕ್ಕದಲ್ಲಿ ಕುಳಿತು ಕತ್ತು ಹೊರಳಿಸಿ ಕಾರ್ತಿಕನ ಮುಖಭಾವವನ್ನು ತಿಳಿಯಲೆತ್ನಿಸಿದರೆ ಊಹೂಂ, ಅದು ಎಂದಿನಂತೆ ನಿರ್ವಿಕಾರ ಸಂತಸ, ನಗು, ಸಿಟ್ಟು, ತಿರಸ್ಕಾರ ಯಾವುದೂ ಇಲ್ಲದ 'ವಿಗ್ರಹ ಮುಖ', ಇದು ಯಾವ ದೇವನ ಸೃಷ್ಟಿ?– ಎಂದು ಮರುಕ ಉಂಟಾಗುತ್ತದೊಮ್ಮೆಮ್ಮೆ; ಮೊದಮೊದಲು ಯಾವ ಭಾವನೆಗಳಿದ್ದರೂ ಸರಿ, ನಂತರ ಅವನ ಬಗ್ಗೆ ಅವಳಿಗೆ ನಿರ್ವಿಕಾರ ಬೆಳೆಯುತ್ತ ನಡೆಯಿತು.

ಕಾರು ಭವ್ಯ ಹೋಟೆಲಿನ ಮುಂದೆ ನಿಂತಾಗ ಅವಳ ಮುಖದಲ್ಲಿ ಪ್ರಶ್ನೆ ಇಣುಕಿತು.

'ಲೆಟ್ ಅಸ್ ಹ್ಯಾವ್ ಎ ಕಪ್ ಆಫ್ ಟೀ' ಎನ್ನುತ್ತ ಅವನು ಅವಳ ತೋಳು ಸವರಿ, ಕೆನ್ನೆಯ